## ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಬಿಡಿ/1760/2021 ಬಹುಮಹಡಿಗಳ ಕಟ್ಟಡ,
ಮಂಡನಾಧಿಕಾರಿಗಳ ಶಾಖೆ ಎ.ಆರ್.ಇ.17 ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 03/03/2022

### ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3)ರ ಅನ್ವಯ ವರದಿ

*****

ವಿಷಯ: ಸರ್ಕಾರಿ ನೌಕರರಾದ ಶ್ರೀ ಕೆ. ಎನ್. ಆನಂದ ತಂದೆ ಲೇಟ್ ನಂಜಯ್ಯ, ದ್ವಿತೀಯ ದರ್ಜೆ ಸಹಾಯಕರು, ಉಪನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಜಿಲ್ಲಾ ಪಂಚಾಯತ್ ಭವನ, ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ ರವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

*****

1) ಪೋಲೀಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ರಾಮನಗರ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಸಲ್ಲಿಸಿದ ತನಿಖಾ ವರದಿ ಹಾಗೂ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ನೌಕರರಾದ ಶ್ರೀ ಕೆ. ಎನ್. ಆನಂದ ತಂದೆ ಲೇಟ್ ನಂಜಯ್ಯ, ದ್ವಿತೀಯ ದರ್ಜೆ ಸಹಾಯಕರು, ಉಪನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಜಿಲ್ಲಾ ಪಂಚಾಯತ್ ಭವನ, ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಇವರನ್ನು ದೂರುದಾರರಾದ ಶ್ರೀ ಕೆ. ರಾಮಯ್ಯ ತಂದೆ ಕಾಳಯ್ಯ, ವಾಸ: ತುಂಬೇನಹಳ್ಳಿ ಗ್ರಾಮ ಕೈಲಂಚ ಹೋಬಳಿ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು, ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರವರು ಸ್ವಯಂ ಪ್ರೇರಿತ ತನಿಖೆ ಕೈಗೊಂಡಿರುತ್ತಾರೆ.

**<u>2) ದೂರಿನ ಸಂಕ್ಷಿಪ್ತ ವಿವರಣೆ:-</u>** ದೂರುದಾರರು ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆಯ ಕ್ರೈಂ ನಂ. 112/2017 ಕಲಂ 323, 324, 354, 504, 506 ಭಾ.ದಂ.ಸಂ. ಸಹ ಕಲಂ 3 (1)(ಎಸ್) ಮತ್ತು 3 (1)(ಡಬ್ಲ್ಯು) ಎಸ್. ಸಿ./ಎಸ್.ಟಿ. ಕಾಯಿದೆ 2015 ಕೇಸಿನಲ್ಲಿ ಸಂತ್ರಸ್ಥರಾದ ದೂರುದಾರರಾದ (1) ಶ್ರೀ ಕೆ. ರಾಮಯ್ಯ (2) ಶ್ರೀ ನವೀನ್ ಕುಮಾರ ತಂದೆ ಚಿಕ್ಕಣ್ಣ ಹಾಗೂ ನವೀನ್ ಕುಮಾರ್‌ರವರ ತಾಯಿ (3) ಶ್ರೀಮತಿ ನಾಗರತ್ನಮ್ಮರವರಿಗೆ ಸರ್ಕಾರದಿಂದ ನೀಡಲಾಗುವ ಪರಿಹಾರದ ಮೊತ್ತದ ಚೆಕ್ ನೀಡಲು ಎದುರುದಾರರು ಕಡತದ ವಿಷಯ ನಿರ್ವಾಹಕರಾಗಿದ್ದು, ಅವರ ಬಳಿ ವಿಚಾರಿಸಲಾಗಿ ಮೇಲ್ಕಂಡ ಮೂರು ಜನರಿಗೆ ತಲಾ ರೂ. 10,000/- ಗಳಂತೆ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ಈ ಬಗ್ಗೆ ಸ್ಯಾಮ್‌ಸಂಗ್ ಮೊಬೈಲ್‌ನಲ್ಲಿ ಸಂಭಾಷಣೆಯನ್ನು ಧ್ವನಿ ಮುದ್ರಣ ಮಾಡಿಕೊಂಡಿರುತ್ತಾರೆ. ದೂರುದಾರರಿಗೆ ಲಂಚದ ಹಣ ನೀಡಲು ಇಷ್ಟವಿಲ್ಲದ ಕಾರಣ, ದೂರುದಾರರು ರಾಮನಗರ ಜಿಲ್ಲೆ ಎ.ಸಿ.ಬಿ. ಪೊಲೀಸ್ ಠಾಣೆಗೆ ರೆಕಾರ್ಡ್ ಮಾಡಿದ ಸಂಭಾಷಣೆಯೊಂದಿಗೆ ದೂರನ್ನು ದಿನಾಂಕ 22/08/2017ರಂದು ನೀಡಿರುತ್ತಾರೆ. ಈ ಬಗ್ಗೆ ರಾಮನಗರ ಎ.ಸಿ.ಬಿ. ಠಾಣೆಯ ಅಧಿಕಾರಿಗಳು ದೂರನ್ನು ಪಡೆದು ತಮ್ಮ ಠಾಣೆಯ ಗುನ್ನೆ ನಂ. 07/2017 ರಲ್ಲಿ ಪ್ರಕರಣ ನೋಂದಾಯಿಸಿಕೊಂಡಿರುತ್ತಾರೆ.

3) ತನಿಖಾಧಿಕಾರಿಗಳು ದಿನಾಂಕ 22/08/2017 ರಂದು ನೆರಳು ಸಾಕ್ಷಿ ಶ್ರೀ ಸಮೀವುಲ್ಲಾ ಬಿನ್ ಅಬ್ದುಲ್ ರೌಫ್, ಆರೋಗ್ಯ ಮೇಲ್ವಿಚಾರಕರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಮನಗರ ಹಾಗೂ ಸಹ ಪಂಚರನ್ನು ಠಾಣೆಗೆ ಬರ ಮಾಡಿಕೊಂಡು ದೂರುದಾರರನ್ನು ಪರಿಚಯಿಸಿ, ಅವರಿಂದ ದೂರಿನ ವಿಷಯವನ್ನು ತಿಳಿದ ನಂತರ ಎದುರುದಾರರು ಸರ್ಕಾರಿ ಕೆಲಸ ನಿರ್ವಹಿಸಲು ಲಂಚದ ಹಣಕ್ಕೆ ಒತ್ತಾಯ ಮಾಡಿರುವುದಾಗಿ ತಿಳಿಸಿದ್ದು, ದೂರುದಾರರು ಸ್ಯಾಮ್‌ಸಂಗ್ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದನ್ನು ಹಾಜರುಪಡಿಸಿದ್ದು, ರೆಕಾರ್ಡ್ ಮಾಡಿದ ಸಂಭಾಷಣೆಯನ್ನು ಡೇಟಾ ಕಾರ್ಡ್ ಸಹಾಯದಿಂದ ಕಂಪ್ಯೂಟರ್ ಮೂಲಕ ಯಥಾವತ್ತಾಗಿ ಸಿ.ಡಿ.ಗೆ

ವರ್ಗಾಯಿಸಿರುತ್ತಾರೆ. ಸದರಿ ಸಂಭಾಷಣೆಯನ್ನು ಪ್ಲೇ ಮಾಡಿ ನೋಡಲಾಗಿ ದೂರುದಾರ ಮತ್ತು ಎದುರುದಾರರು ನಡೆಸಿರುವ ಸಂಭಾಷಣೆಗಳು ಕನ್ನಡ ಭಾಷೆಯಲ್ಲಿರುತ್ತವೆ. ಸದರಿ ಸಂಭಾಷಣೆಯನ್ನು ಸಿ.ಡಿ.ಗೆ ವರ್ಗಾಯಿಸಿ ಅಪೀಕರಣ ಮಾಡಿ ಅಮಾನತ್ ಪಡಿಸಿಕೊಂಡಿರುತ್ತಾರೆ. ನಂತರ ಲಂಚದ ಹಣ ರೂ. 20,000/- ಗಳನ್ನು ದೂರುದಾರರು ಹಾಜರುಪಡಿಸಿದ್ದು, ಅವುಗಳ ಮುಖಬೆಲೆ ಮತ್ತು ನೋಟಿನ ಸಂಖ್ಯೆ ಪ್ರತ್ಯೇಕ ಹಾಳೆಯಲ್ಲಿ ನಮೂದಿಸಿ ಪಂಚರ ಮತ್ತು ತನಿಖಾಧಿಕಾರಿಗಳ ಸಹಿ ಪಡೆದಿರುತ್ತಾರೆ. ಸದರಿ ಹಣಕ್ಕೆ ಪಿನಾಪ್ತಲಿನ್ ಪೌಡರ್ ಲೇಪಿಸಿ ಸೋಡಿಯಂ ಕಾರ್ಬೋನೇಟ್ ದ್ರಾವಣ ತಯಾರಿಸಿ ಸದರಿ ದ್ರಾವಣದಲ್ಲಿ ನೋಟುಗಳಿಗೆ ಪಿನಾಪ್ತಲಿನ್ ಪೌಡರ್ ಲೇಪಿಸಿದ ಪಂಚನ ಕೈ ಬೆರಳುಗಳನ್ನು ದ್ರಾವಣದಲ್ಲಿ ಅದ್ದಿ ತೆಗೆದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ಈ ಬಗ್ಗೆ ಮಾದರಿ ದ್ರಾವಣ ಹಾಗೂ ಗುಲಾಬಿ ಬಣ್ಣಕ್ಕೆ ತಿರುಗಿದ ದ್ರಾವಣವನ್ನು ಪ್ರತ್ಯೇಕವಾಗಿ ವಶಪಡಿಸಿಕೊಂಡು ಹಂತ ಹಂತವಾಗಿ ಫೋಟೋಗಳನ್ನು ತೆಗೆಸಿ ಪ್ರಕರಣದ ಮಾಹಿತಿ ಗೌಪ್ಯತೆಯನ್ನು ಕಾಪಾಡಿಕೊಳ್ಳಲು ತನಿಖಾಧಿಕಾರಿಯವರು ಸೂಚಿಸಿರುತ್ತಾರೆ. ಶ್ರೀ ಸಮೀವುಲ್ಲಾ ಬಿನ್ ಅಬ್ದುಲ್ ರೌಫ್, ಆರೋಗ್ಯ ಮೇಲ್ವಿಚಾರಕರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಮನಗರ ಇವರನ್ನು ನೆರಳು ಸಾಕ್ಷಿಯಾಗಿ ನೇಮಿಸಿ ದೂರುದಾರರೊಂದಿಗೆ ಎದುರುದಾರರ ಬಳಿ ಹೋಗಿ ಅವರಿಗೆ ಅನುಮಾನ ಬಾರದಂತೆ ಮತ್ತು ಎದುರುದಾರರು ಹಾಗೂ ದೂರುದಾರರ ನಡುವೆ ನಡೆದ ಸಂಭಾಷಣೆಯನ್ನು ಕೇಳಿಸಿಕೊಂಡು ಘಟನೆಯನ್ನು ವೀಕ್ಷಿಸಿ, ಎದುರುದಾರರು ಹಣವನ್ನು ಕೇಳಿ ಪಡೆದುಕೊಂಡರೆ, ಹಣವನ್ನು ಹೇಗೆ ಪಡೆದುಕೊಳ್ಳುತ್ತಾರೆ, ಹಣವನ್ನು ಎಲ್ಲಿ ಇಟ್ಟುಕೊಳ್ಳುತ್ತಾರೆ ಎಂಬುದನ್ನು ಗಮನಿಸಿ ನಂತರ ತಿಳಿಸಬೇಕೆಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ. ದೂರುದಾರರಿಗೆ ವಾಯ್ಸ್ ರೆಕಾರ್ಡರನ್ನು ನೀಡಿದ್ದು ಅದನ್ನು ತನ್ನ ಮತ್ತು ಎದುರುದಾರರ ಮಧ್ಯೆ ನಡೆಯುವ ಧ್ವನಿ ಸಂಭಾಷಣೆಯನ್ನು ಮುದ್ರಣ ಮಾಡಿಕೊಳ್ಳಲು ಸೂಚಿಸಿರುತ್ತಾರೆ. ದೂರುದಾರರಿಗೆ ಎದುರುದಾರರು ಲಂಚದ ಹಣ ಬೇಡಿಕೆ ಇಟ್ಟು ಸ್ವೀಕರಿಸಿದ ನಂತರ ತನ್ನ ಕೈಯಿಂದ ತಲೆಯನ್ನು ಸವರಿಕೊಳ್ಳುವುದರ

ಮೂಲಕ ಸಂಜ್ಞೆ ನೀಡಬೇಕೆಂದು ಸೂಚಿಸಿರುತ್ತಾರೆ. ಈ ಬಗ್ಗೆ ಸವಿಸ್ತಾರ ಪ್ರಾಯೋಗಿಕ ಪಂಚನಾಮೆಯನ್ನು ನಿರ್ವಹಿಸಿರುತ್ತಾರೆ.

4) ದಿನಾಂಕ 22/08/2017 ರಂದು ತನಿಖಾಧಿಕಾರಿಗಳು, ದೂರುದಾರರು, ಪಂಚ ಸಾಕ್ಷಿಗಳು ಹಾಗೂ ಸಿಬ್ಬಂದಿಯವರೊಂದಿಗೆ ರಾಮನಗರ ಭ್ರಷ್ಟಾಚಾರ ನಿಗ್ರಹ ದಳ ಪೋಲೀಸ್ ಠಾಣೆಯಿಂದ ಹೊರಟು, ರಾಮನಗರ ಜಿಲ್ಲಾ ಪಂಚಾಯತ್ ಭವನದಲ್ಲಿ ಎದುರುದಾರರನ್ನು ದೂರುದಾರರು ಮತ್ತು ನೆರಳು ಸಾಕ್ಷಿ ಭೇಟಿಯಾದಾಗ ಎದುರುದಾರರು ಅವರನ್ನು ಪಂಚಾಯತ್ ಭವನದ ಅಂಡರ್‌ಗ್ರೌಂಡ್‌ಗೆ ಮೆಟ್ಟಿಲುಗಳ ಮೂಲಕ ಕರೆದುಕೊಂಡು ಹೋಗಿ ಅಂಡರ್‌ಗ್ರೌಂಡ್‌ನಲ್ಲಿ ವಾಹನ ಪಾರ್ಕಿಂಗ್ ಸ್ಥಳದಲ್ಲಿ ದೂರುದಾರರಿಗೆ ರೂ. 20,000/- ಲಂಚದ ಹಣ ಕೇಳಿ, ಸದರಿ ಹಣವನ್ನು ಎದುರುದಾರರು ಬಲಗೈಯಿಂದ ಪಡೆದು ಅವರ ಪ್ಯಾಂಟಿನ ಬಲ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ನಂತರ ದೂರುದಾರರು ತಮ್ಮ ಕೈಯಿಂದ ತಲೆಯನ್ನು ಸವರಿಕೊಳ್ಳುವುದರ ಮೂಲಕ ಸಂಜ್ಞೆಯನ್ನು ನೀಡಿರುತ್ತಾರೆ. ತಕ್ಷಣ ಜೊತೆಯಲ್ಲಿದ್ದ ಕೊ-ಪಂಚ ಉಳಿದ ಸಿಬ್ಬಂಧಿ ಮತ್ತು ತನಿಖಾಧಿಕಾರಯವರು ಎದುರುದಾರರ ಕಛೇರಿಯ ಒಳಗೆ ಬಂದು ತನಿಖಾಧಿಕಾರಿಯವರು ತಮ್ಮ ಗುರುತಿನ ಚೀಟಿಯನ್ನು ತೋರಿಸಿದಾಗ ಎದುರುದಾರರ ಕೈಯಲ್ಲಿದ್ದ ಹಣವನ್ನು ಮುಂದಿನ ಟೇಬಲ್ ಮೇಲೆ ಎಸೆದಿರುತ್ತಾರೆ. ನಂತರ ತನಿಖಾಧಿಕಾರಿಯವರು ಅಲ್ಲಿಯ ನಡುವಳಿಕೆಗಳನ್ನು ತಿಳಿದು ಪಿನಾಪ್ತಲಿನ್ ಲೇಪಿತ ಲಂಚದ ಹಣ ರೂ. 20,000/- ವನ್ನು ಪಂಚರ ಸಮಕ್ಷಮ ಸವಿಸ್ತಾರ ಪಂಚನಾಮೆ ಜರುಗಿಸಿ ಅಮಾನತ್ ಪಡಿಸಿಕೊಂಡಿರುತ್ತಾರೆ. ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ಬರೆದುಕೊಂಡಂತಹ ನೋಟುಗಳ ಮುಖಬೆಲೆ ಮತ್ತು ಕ್ರಮ ಸಂಖ್ಯೆಯು ತಾಳೆಯಾಗಿದ್ದು ಇರುತ್ತದೆ. ತನಿಖಾಧಿಕಾರಿಯವರು ಪಂಚರ ಸಮಕ್ಷಮ ಸದರಿ ಲಂಚದ ಹಣವಾದ 20,000/- ರೂ.ಗಳನ್ನು ಎದುರುದಾರರಿಂದ ಅಮಾನತ್ತು ಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯವರು ಎದುರುದಾರರ ಬಲಗೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ಅದೇ ರೀತಿ

ಎದುರುದಾರರ ಎಡಗೈ ಬೆರಳುಗಳನ್ನು ಇನ್ನೊಂದು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ಬದಲಿ ಪ್ಯಾಂಟಿನ ವ್ಯವಸ್ಥೆಯನ್ನು ಮಾಡಿ ಅವರ ಪ್ಯಾಂಟನ್ನು ಬಿಚ್ಚಿಸಿಕೊಂಡು ಸದರಿ ಪ್ಯಾಂಟಿನ ಎಡಭಾಗದ ಜೇಬನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ ಪಂಚರ ಸಮಕ್ಷಮ ದ್ರಾವಣಗಳನ್ನು ಹಾಗೂ ಪ್ಯಾಂಟನ್ನು ಅಮಾನತ್‌ಪಡಿಸಿಕೊಂಡಿರುತ್ತಾರೆ. ದೂರುದಾರರು ಪಂಚ ಸಾಕ್ಷಿಗಳು, ಸಿಬ್ಬಂಧಿಯವರೊಂದಿಗೆ ತನಿಖಾಧಿಕಾರಿಗಳು ನೆರಳು ಸಾಕ್ಷಿ ಸಮೀವುಲ್ಲಾ ಬಿನ್ ಅಬ್ದುಲ್ ರೌಫ್, ಸಹ ಪಂಚ ಅವರಿಂದ ಅಲ್ಲಿಯ ನಡವಳಿಕೆಗಳನ್ನು ತಿಳಿದು ಸವಿಸ್ತಾರ ಜಪ್ತಿ ಪಂಚನಾಮೆ ನಿರ್ವಹಿಸಿರುತ್ತಾರೆ. ತನಿಖಾಧಿಕಾರಿಯವರು ಎದುರುದಾರರಿಗೆ ಸಮಜಾಯಿಷಿ ಕೇಳಲಾಗಿ ಸದರಿಯವರು "ರಾಮಯ್ಯ ಮತ್ತು ನವೀನ್ ಕುಮಾರ್ ಎಂಬುವರು ದೌರ್ಜನ್ಯ ಪ್ರಕರಣದಲ್ಲಿ ಪರಿಹಾರ ಧನವನ್ನು ಅತೀ ಜರೂರಾಗಿ ನೀಡಬೇಕೆಂದು ಪದೇ ಪದೇ ಕಛೇರಿಗೆ ಬಂದು ಒತ್ತಾಯ ಮಾಡುತ್ತಿದ್ದರು. ನಾನು ಇನ್ನು ಒಂದು ವಾರ ಆಗುತ್ತೆ, ನೀವು ಕಛೇರಿಗೆ ಪದೇ ಪದೇ ಬರುವ ಅವಶ್ಯಕತೆ ಇರುವುದಿಲ್ಲ, ನಿಮ್ಮ ಪರಿಹಾರದ ಹಣ ನಿಮ್ಮ ಬ್ಯಾಂಕ್ ಖಾತೆಗೆ ಡಿ.ಬಿ.ಟಿ. ಮೂಲಕ ಬರುತ್ತೆ ಎಂದು ಹೇಳಿದರೂ ಕೇಳದೇ ರಾಮಯ್ಯ ಮತ್ತು ನವೀನ್ ಕುಮಾರ್ ತುಂಬೇನಹಳ್ಳಿ ಗ್ರಾಮ ಇವರು ನನಗೆ ಒತ್ತಾಯಪೂರ್ವಕವಾಗಿ ನನ್ನ ಕೈಗೆ ಹಣ ನೀಡಿ ಹೊರಟು ಹೋದರು. ನಾನು ಬೇಡಿ ಎಂದರೂ ಕೇಳದೆ ನನ್ನ ಹತ್ತಿರ ನಿಲ್ಲದೇ ಬೇಗ ಹೊರಟು ಹೋದರು. ನಂತರ ಜಾಗೃತ ದಳದವರು ನನ್ನನ್ನು ಹಿಡಿದು ಹಣದ ಬಗ್ಗೆ ವಿಚಾರಣೆ ಮಾಡಿರುತ್ತಾರೆ. ನಾನು ಎಷ್ಟು ಹಣ ಇದೆ ಎಂದು ಸಹ ನೋಡಲಿಲ್ಲ. ಜಾಗೃತ ದಳದವರು ಬಂದು ಲೆಕ್ಕ ಮಾಡಿದ ನಂತರ ನನಗೆ 20,000/- ರೂ.ಗಳು ಇರುವುದು ತಿಳಿದಿರುತ್ತದೆ. ರಾಮಯ್ಯ ಮತ್ತು ನವೀನ್ ಕುಮಾರ್ ಎಂಬುವರು ಬೇಗ ಪರಿಹಾರ ಹಣ ನೀಡಲು ಕ್ರಮ ವಹಿಸಿಲ್ಲವೆಂದು ಈ ರೀತಿ ಮಾಡಿರುತ್ತಾರೆ" ಎಂದು ವ್ಯತಿರಿಕ್ತ ಹೇಳಿಕೆ ನೀಡಿರುತ್ತಾರೆ.

5) ಸದರಿ ಹಣದ ಬಗ್ಗೆ ತನಿಖಾಧಿಕಾರಿಯು ಎದುರುದಾರರನ್ನು ವಿಚಾರಿಸಿದಾಗ ಸರಿಯಾದ, ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ಅಥವಾ ಲೆಕ್ಕ ನೀಡಿರುವುದಿಲ್ಲ.

6) ತನಿಖಾಧಿಕಾರಿಯವರು ಸವಿಸ್ತಾರ ಜಪ್ತಿ ಪಂಚನಾಮೆ ಪೂರೈಸಿದ ನಂತರ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ.

7) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ ಮತ್ತು ಇತರ ಅಂಶಗಳು ಎದುರುದಾರರ ದುರ್ನಡತೆಯನ್ನು ತೋರಿಸುತ್ತದೆ.

8) ಧ್ವನಿ ವಿಶ್ಲೇಷಣಾ ವರದಿ, ವಿಧಿ ವಿಜ್ಞಾನ ಪ್ರಯೋಗಾಲಯದಿಂದ ಬಂದಿರುವುದಿಲ್ಲ. ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ಎದುರುದಾರರಿಂದ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇರುವುದು ದೃಢಪಟ್ಟಿರುತ್ತದೆ.

9) ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಸಮಜಾಯಿಷಿಯನ್ನು ದಿನಾಂಕ 25/10/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯಲ್ಲಿ "ಈಗಾಗಲೇ ದಿನಾಂಕ 22/08/2017 ರಂದು ತನಿಖಾಧಿಕಾರಿಯವರಿಗೆ ನನ್ನ ವಿವರವಾದ ಸಮಜಾಯಿಷಿಯನ್ನು ಲಿಖಿತ ರೂಪವಾಗಿ ಸಹಿ ಮಾಡಿ ಕೊಟ್ಟಿರುತ್ತೇನೆ. ಅದರ ನಕಲನ್ನು ಈ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿಯನ್ನು ಲಗತ್ತಿಸಿದ್ದು ಅದನ್ನೇ ನನ್ನ ಸಮಜಾಯಿಷಿ ಎಂದು ಪರಿಗಣಿಸಬೇಕು" ಎಂದು ಪ್ರಾರ್ಥಿಸಿಕೊಂಡಿರುತ್ತಾರೆ. ಪರಿವೀಕ್ಷಣಾ ಟಿಪ್ಪಣಿಗೆ ನೀಡಿದ ಸಮಜಾಯಿಷಿಯಲ್ಲಿ ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ ಆಪಾದನೆಗಳನ್ನು ಅಲ್ಲಗೆಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಅವರು ನೀಡಿರುವ ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

10) ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ

ಕರ್ತವ್ಯ ನಿಷ್ಠೆ ತೋರಿಸದೆ, ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

11) ಆದ್ದರಿಂದ, ಎದುರುದಾರರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966 ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) 2021 ನಿಯಮ 3 (1) (i) ರಿಂದ (iii) ರ ಉಲ್ಲಂಘನೆಗಾಗಿ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿಯ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಉಪಲೋಕಾಯುಕ್ತರಿಗೆ ವಹಿಸಬೇಕೆಂದೂ ಕೋರಿದೆ.

12) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

7/3/22

**(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)**
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.